All India Radio: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

02.05.2025 19.35 hrs

<><*<><>*><>

ಮುಖ್ಯಾಂಶಗಳು

- ಆಂಧ್ರಪ್ರದೇಶದಲ್ಲಿ ೫೮ ಸಾವಿರ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
- ಹಿರಿಯ ನಾಗರಿಕರ ಕಲ್ಯಾಣ ಪೋರ್ಟಲ್ ಲೋಕಾರ್ಪಣೆಗೊಳಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು
- ವೇವ್ಸ್ ೨೦೨೫; ಜಾಗತಿಕ ಮಾಧ್ಯಮ ಸಂವಾದದಲ್ಲಿ ವೇವ್ಸ್ ಘೋಷಣೆ ಅಂಗೀಕರಿಸಿದ ಭಾರತದ ಸದಸ್ಯ ರಾಷ್ಟ್ರಗಳು
- ಐಪಿಎಲ್ ಟಿ-೨೦ ಕ್ರಿಕೆಟ್; ಗುಜರಾತ್ ಟೈಟಾನ್ಸ್ ವಿರುದ್ಧ ಟಾಸ್ ಗೆದ್ದ ಸನ್‌ರೈಸರ್ಸ್ ಹೈದರಾಬಾದ್ ಫೀಲ್ಡಿಂಗ್ ಆಯ್ಕೆ

<><*<><>*><>

ಆಂಧ್ರಪ್ರದೇಶದ ಅಮರಾವತಿಯಲ್ಲಿ ಸುಮಾರು ೫೮ ಸಾವಿರ ಕೋಟಿ ರೂಪಾಯಿಗೂ ಅಧಿಕ ವೆಚ್ಚದ ಹಲವು ಅಭಿವೃದ್ಧಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆಗೊಳಿಸಿದರು. ಈ ವೇಳೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಈ ಯೋಜನೆಗಳು ಆಂಧ್ರಪ್ರದೇಶದ ಆಕಾಂಕ್ಷೆಗಳು ಮತ್ತು ವಿಕಸಿತ ಭಾರತದ ಆಶಯಗಳಿಗೆ ಬಲವಾದ ಅಡಿಪಾಯವನ್ನು ರೂಪಿಸುತ್ತದೆ ಎಂದು ಹೇಳಿದರು. ಕಳೆದ ಹತ್ತು ವರ್ಷಗಳಲ್ಲಿ ದೇಶವು ಭೌತಿಕ, ಡಿಜಿಟಲ್ ಮತ್ತು ಸಾಮಾಜಿಕ ಮೂಲಸೌಕರ್ಯದ ಮೇಲೆ ವ್ಯಾಪಕವಾಗಿ ಗಮನಹರಿಸಿದೆ. ಮೂಲಸೌಕರ್ಯವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಭಾರತವು ಒಂದು ಎಂದರು. ಎನ್‌ಡಿಎ ಸರ್ಕಾರವು ವಿಶೇಷವಾಗಿ ರೈತರ ಅಭಿವೃದ್ಧಿಯತ್ತ ಗಮನಹರಸಿದೆ. ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ರೈತರಿಗೆ ಕೈಗೆಟಕುವ ದರದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಒದಗಿಸಲು ೧೨ ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ ಎಂದು ಪ್ರಧಾನಿ ನರೇಂದ್ರ ತಿಳಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೮ ಸೆಕೆಂಡ್ಸ್ )

ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ, ಕೇರಳದ ತಿರುವನಂತಪುರದಲ್ಲಿ ಭಾರತದ ಮೊದಲ ಅರೆ ಸ್ವಯಂಚಾಲಿತ ಆಳಸಾಗರದ ವಿಳಿಂಜಂ ಅಂತಾರಾಷ್ಟ್ರೀಯ ಬಂದರನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ೮ ಸಾವಿರದ ೯೦೦ ಕೋಟಿ ರೂಪಾಯಿ ವೆಚ್ಚದಲ್ಲಿ ಈ ಬಂದರನ್ನು ಅಭಿವೃದ್ಧಿಪಡಿಸಲಾಗಿದೆ.

<><*<><>*><>

ಹಿರಿಯ ನಾಗರಿಕರು ಕುಟುಂಬದ ಪ್ರಮುಖ ಭಾಗವಾಗಿದ್ದು, ಕುಟುಂಬಕ್ಕೆ ಭಾವನಾತ್ಮಕ ಆಧಾರಸ್ತಂಭವಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ಇಂದು ನಡೆದ "ಗೌರವದೊಂದಿಗೆ ಹಿರಿತನ" ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ಸಮಾಜದ ಮಾರ್ಗದರ್ಶನಕ್ಕೆ ಹಿರಿಯ ನಾಗರಿಕರ ಸಲಹೆ ಮುಖ್ಯವಾಗಿದೆ. ಹಿರಿಯ ನಾಗರಿಕರ ಸುರಕ್ಷತೆ, ಆರೋಗ್ಯ ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಭಾರತ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ ಎಂದರು. ಆಯುಷ್ಮಾನ್ ಭಾರತ್ - ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯಡಿಯಲ್ಲಿ ೭೦ ವರ್ಷಕ್ಕಿಂತ ಮೇಲ್ಪಟ್ಟ ಜನರಿಗೆ ಆರೋಗ್ಯ ರಕ್ಷಣೆಯನ್ನು ಸಹ ನೀಡಲಾಗುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. ಇದೇ ವೇಳೆ ಹಿರಿಯ ನಾಗರಿಕರ ಕಲ್ಯಾಣ ಪೋರ್ಟಲ್‌ಗೆ ರಾಷ್ಟ್ರಪತಿಗಳು ಚಾಲನೆ ನೀಡಿದರು. ಅಲ್ಲದೇ, ಅರುಣಾಚಲ ಪ್ರದೇಶದ ತವಾಂಗ್, ಆಂಧ್ರಪ್ರದೇಶದ ಅಂಕಾಪಲ್ಲಿ, ಉತ್ತರಾಖಂಡದ ನೈನಿತಾಲ್, ನಾಗಾಲ್ಯಾಂಡ್‌ನ ಪೋಖಾ ಮತ್ತು ತಮಿಳುನಾಡಿನ ವೆಲ್ಲೂರಿನಲ್ಲಿ  ಒಟ್ಟು ಐದು ಹಿರಿಯ ನಾಗರಿಕರ ಮನೆಗಳನ್ನು ವರ್ಚುವಲ್ ಆಗಿ ಅವರು ಉದ್ಘಾಟಿಸಿದರು.

<><*<><>*><>

ಜಾಗತಿಕ ಮಾಧ್ಯಮ ಸಂವಾದದ ಸಂದರ್ಭದಲ್ಲಿ ಇಂದು ವೇವ್ಸ್ ಘೋಷಣೆಯನ್ನು ಅಂಗೀಕರಿಸಲಾಯಿತು. ಇದೇ ವೇಳೆ ಸದಸ್ಯ ರಾಷ್ಟ್ರಗಳು ಸಂಪ್ರದಾಯಗಳು ಮತ್ತು ಪರಂಪರೆಗೆ ಒತ್ತು ನೀಡುವ ನಿಟ್ಟಿನಲ್ಲಿ ಸಹಕರಿಸಲು ಒಪ್ಪಿಕೊಂಡವು.ವೇವ್ಸ್ ೨೦೨೫ ಅಂಗವಾಗಿ ಮುಂಬೈನ ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಜಾಗತಿಕ ಮಾಧ್ಯಮ ಸಂವಾದದಲ್ಲಿ ೭೭ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮತ್ತು ಕೇಂದ್ರ ವಾತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅಧ್ಯಕ್ಷತೆ ವಹಿಸಿದ್ದರು. ತಪ್ಪು ಮಾಹಿತಿ ಮತ್ತು ತಪ್ಪು ಮಾಹಿತಿಯ ಹರಡುವಿಕೆಯನ್ನು ತಡೆಗಟ್ಟಲು ಹಾಗೂ ಮಾಧ್ಯಮ ಸಮಗ್ರತೆ, ಸತ್ಯ ಆಧಾರಿತ ಪತ್ರಿಕೋದ್ಯಮ ಮತ್ತು ಜವಾಬ್ದಾರಿಯುತ ಜಾಹೀರಾತನ್ನು ಉತ್ತೇಜಿಸಲು ಸಮಾವೇಶದಲ್ಲಿ ಭಾಗವಹಿಸಿದ್ದ ದೇಶಗಳು ಸಮ್ಮತಿ ಸೂಚಿಸಿದವು. ಅಭಿವೃದ್ಧಿ ಮತ್ತು ಸಾಮರಸ್ಯವನ್ನು ಉತ್ತೇಜಿಸುವಲ್ಲಿ ಮಾಧ್ಯಮ ಮತ್ತು ಮನರಂಜನೆಯ ನಿರ್ಣಾಯಕ ಪಾತ್ರವನ್ನು

ವಹಿಸುತ್ತವೆ. ಮಾರುಕಟ್ಟೆ ದಕ್ಷತೆ, ಸೃಜನಶೀಲತೆ ಮತ್ತು ಪ್ರೇಕ್ಷಕರ ತೊಡಗಿಸಿಕೊಳ್ಳುವಿಕೆಯನ್ನು ಕೃತಕ ಬುದ್ಧಿಮತ್ತೆ ಹೆಚ್ಚಿಸುತ್ತದೆ ಮತ್ತು ಹಾನಿಗಳನ್ನು ಕಡಿಮೆ ಮಾಡುವ ಮೂಲಕ ಮತ್ತು ಪಕ್ಷಪಾತಗಳನ್ನು ಕಡಿಮೆ ಮಾಡುವ ಮೂಲಕ ಅದರ ನೈತಿಕ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ ಎಂಬುದನ್ನು ಸದಸ್ಯ ರಾಷ್ಟ್ರಗಳು ಗುರುತಿಸಿವೆ.

<><*<><>*><>

ವೇವ್ಸ್-೨೦೨೫ರ ಮೊದಲ ಒಂದೂವರೆ ದಿನದಲ್ಲಿ ಚಲನಚಿತ್ರ, ಸಂಗೀತ, ಅನಿಮೇಷನ್, ರೇಡಿಯೋ ಮತ್ತು ವಿಎಫ್‌ಎಕ್ಸ್ ವಲಯಗಳಲ್ಲಿ ೨೫೪ ಕೋಟಿ ರೂಪಾಯಿ ಮೌಲ್ಯದ ವಹಿವಾಟನ್ನು ವೇವ್ಸ್ ಬಜಾರ್ ದಾಖಲಿಸಿದೆ.

ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜೂ, ಮುಂದಿನ ೨ ದಿನಗಳಲ್ಲಿ ಈ ವಹಿವಾಟು ಗಮನಾರ್ಹವಾಗಿ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಹೇಳಿದರು. ಇದೇ ವೇಳೆ ಬುಸಾನ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ವ್ಯಾಪಾರ ಮಾರುಕಟ್ಟೆಯಾದ ಏಷ್ಯನ್ ಸಿನಿಮಾ ನಿಧಿಯೊಂದಿಗೆ ೨ ಕೋಟಿ ರೂಪಾಯಿ ಮೌಲ್ಯದ ಪೋಸ್ಟ್ ಪ್ರೊಡಕ್ಷನ್ ಮತ್ತು ವಿಎಫ್‌ಎಕ್ಸ್ ಒಪ್ಪಂದವನ್ನು ವೇವ್ಸ್ ಬಜಾರ್ ಅಂತಿಮಗೊಳಿಸಿದೆ ಎಂದು ಅವರು ತಿಳಿಸಿದರು.

<><*<><>*><>

ವೇವ್ಸ್-೨೦೨೫ ರ ಭಾಗವಾಗಿ ಮುಂಬೈನಲ್ಲಿ ನಡೆಯುತ್ತಿರುವ ಜಾಗತಿಕ ಸಂವಾದದಲ್ಲಿ 'ರೇಡಿಯೋ ರಿ-ಇಮ್ಯಾಜಿನ್ಡ್- ಡಿಜಿಟಲ್ ಯುಗದಲ್ಲಿ ಅಭಿವೃದ್ಧಿ ಹೊಂದುತ್ತಿದೆ' ಎಂಬ ವಿಷಯದ ಕುರಿತು ಚರ್ಚೆ ನಡೆಯಿತು. ಚರ್ಚೆಯಲ್ಲಿ ಭಾಗವಹಿಸಿದ ಪ್ರಸಾರ ಭಾರತಿ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿ ಶೇಖರ್ ವೆಂಪಟ್ಟಿ, ಭಾರತವು ರೇಡಿಯೋಗೆ ಅತಿ ದೊಡ್ಡ ಮಾರುಕಟ್ಟೆಯಾಗಿದೆ.s ಸಾರ್ವಜನಿಕ ಒಳಿತಿಗಾಗಿ ಬಳಕೆ, ಈ ಮಾಧ್ಯಮದ ಮೂಲ ಉದ್ದೇಶವಾಗಿದೆ ಎಂದು ಹೇಳಿದರು. ಕೃತಕ ಬುದ್ಧಿಮತ್ತೆ ಸಾಧನಗಳು ಹಾಗೂ ಸಾಂಪ್ರದಾಯಿಕ ರೇಡಿಯೋದಂತಹ ಸಾಧನಗಳು ಎರಡೂ ಕೂಡ ಅಸ್ತಿತ್ವದಲ್ಲಿರಬೇಕು ಎಂದು ಅವರು ಪ್ರತಿಪಾದಿಸಿದರು.

<><*<><>*><>

ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ನಾಳೆ ಮುಂಬೈನಲ್ಲಿ ನಡೆಯುವ ವೇವ್ಸ್ ೨೦೨೫ ಕಾರ್ಯಕ್ರಮದಲ್ಲಿ ಮಾಧ್ಯಮ ಮತ್ತು ಮನರಂಜನಾ ವಲಯದ ೨೦೨೪-೨೫ರ ಅಂಕಿ-ಅಂಶಗಳ ಕೈಪಿಡಿಯನ್ನು ಬಿಡುಗಡೆ ಮಾಡಲಿದೆ. ಮಾಧ್ಯಮ ಮತ್ತು ಮನರಂಜನಾ ವಲಯದ ಬಗ್ಗೆ ಸಕಾಲಿಕ, ವಿಶ್ವಾಸಾರ್ಹ, ಅಧಿಕೃತ ಮತ್ತು ಸಮಗ್ರ ದತ್ತಾಂಶದ ಅಗತ್ಯವನ್ನು ಸರ್ಕಾರ ದೃಢೀಕರಿಸುವ ಭಾಗವಾಗಿ ಈ ಕೈಪಿಡಿ ಇದೆ. ಮಾಧ್ಯಮ ಮತ್ತು ಮನರಂಜನೆಯು ಸೇವಾ

ವಲಯದ ಪ್ರಮುಖ ಅಂಶವಾಗಿದ್ದು, ಇದು ದೇಶದ ಆರ್ಥಿಕತೆಯ ಬೆಳವಣಿಗೆಗೆ ಕೊಡುಗೆ ನೀಡುವ ದೊಡ್ಡ ಸಾಮರ್ಥ್ಯವನ್ನು ಹೊಂದಿದೆ ಎಂದು ಸಚಿವಾಲಯ ಹೇಳಿದೆ. ಈ ವಲಯವು ೨೦೨೭ ರಲ್ಲಿ ಸಿಎಜಿಆರ್ ಶೇಕಡ ೭ ರಷ್ಟು ಬೆಳೆದು, ಮೂರು ಸಾವಿರ ಶತಕೋಟಿ ರೂಪಾಯಿಗಳಿಗೆ ತಲುಪುವ ನಿರೀಕ್ಷೆಯಿದೆ.

<><*<><>*><>

ಭಯೋತ್ಪಾದನೆಯು ಜಾಗತಿಕವಾಗಿ ಗಂಭೀರ ಸವಾಲನ್ನು ಒಡ್ಡುತ್ತಿದೆ. ಭಯೋತ್ಪಾದನೆ ಬೆದರಿಕೆಯನ್ನು ನಿರ್ಮೂಲನೆ ಮಾಡಲು ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳು ಒಟ್ಟಾಗಬೇಕು ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಕರೆ ನೀಡಿದರು. ನವದೆಹಲಿಯ ಸಂಸತ್ ಭವನದ ಸಂಕೀರ್ಣದಲ್ಲಿಂದು ಜಪಾನ್ ಸಂಸತ್‌ನ ಸ್ಪೀಕರ್ ನುಕಾಗೊ ಫುಕುಶಿರೋ ನೇತೃತ್ವದ ಜಪಾನ್ ಸಂಸದೀಯ ನಿಯೋಗದೊಂದಿಗೆ ಸಭೆ ನಡೆಸಿದ ಅವರು, ಭಯೋತ್ಪಾದನೆಯನ್ನು ಪರಿಣಾಮಕಾರಿಯಾಗಿ ಎದರಿಸಲು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಲು ಪರಸ್ಪರ ನಂಬಿಕೆ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳಿಗೆ ಗೌರವ ನೀಡುವ ಅಗತ್ಯವನ್ನು ಒತ್ತಿ ಹೇಳಿದರು. ಇದೇ ವೇಳೆ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಜಪಾನ್ ಸಂಸತ್‌ನ ಸ್ಪೀಕರ್ ಬಲವಾಗಿ ಖಂಡಿಸಿದರು. ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟಕ್ಕೆ ಜಪಾನ್‌ನ ದೃಢವಾದ ಬೆಂಬಲವನ್ನು ಅವರು ಪುನರುಚ್ಚರಿಸಿದರು.

<><*<><>*><>

ಭಾರತದ ವಿದೇಶಿ ವಿನಿಮಯ ಮೀಸಲು ಏಪ್ರಿಲ್ ೨೫ ರ ವೇಳೆಗೆ ೧.೯೮ ಶತಕೋಟಿ ಡಾಲರ್‌ಗಳಷ್ಟು ಏರಿಕೆಯಾಗಿ, ೬೮೮.೧೩ ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಭಾರತೀಯ ರಿಸರ್ವ್ ಬ್ಯಾಂಕ್-ಆರ್‌ಬಿಐ ಬಿಡುಗಡೆಗೊಳಿಸಿದ ವರದಿ ಪ್ರಕಾರ, ಅಂತಾರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಆರ್‌ಬಿಐ ಸ್ಥಾನವು ೨ ದಶಲಕ್ಷ ಡಾಲರ್‌ಗಳಷ್ಟು ಏರಿಕೆಯಾಗಿ, ೪.೫೧ ಶತಕೋಟಿ ಡಾಲರ್‌ಗಳನ್ನು ತಲುಪಿದೆ. ಇನ್ನೊಂದೆಡೆ, ಮೀಸಲು ಚಿನ್ನ ೨೦೭ ದಶಲಕ್ಷ ಡಾಲರ್‌ಗಳಷ್ಟು ಕಡಿಮೆಯಾಗಿ, ಒಟ್ಟು ೮೪.೩೭ ಶತಿಕೋಟಿ ಡಾಲರ್‌ಗಳಿಗೆ ತಲುಪಿದೆ.

<><*<><>*><>

ಮುಂದಿನ ನಾಲ್ಕು ವರ್ಷಗಳ ಕಾಲ ದೇಶದ ಯಾವುದೇ ಗ್ರಾಮ ಅಥವಾ ಕೃಷಿಭೂಮಿ ನೀರಿನಿಂದ ವಂಚಿತವಾಗದಂತೆ ಮತ್ತು ಭಾರತ ಬರ ಮುಕ್ತವಾಗುವಂತೆ ಮಾಡಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಹೇಳಿದ್ದಾರೆ.

<><*<><>*><>

ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್

ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

<><*<><>*><>

ಮುಂಬೈ ಷೇರು ಮಾರುಕಟ್ಟೆಯಲ್ಲಿ ಷೇರು ಸಂವೇದಿ ಸೂಚ್ಯಂಕ - ಸೆನ್ಸೆಕ್ಸ್ ೨೬೦ ಅಂಕಗಳು ಏರಿಕೆಯಾಗಿದ್ದು, ದಿನದ ಅಂತ್ಯಕ್ಕೆ ೮೦ ಸಾವಿರದ ೫೦೨ ಅಂಕಗಳು ದಾಖಲಾಗಿದೆ. ಇದೇ ವೇಳೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ ೧೩ ಅಂಕಗಳು ಏರಿಕೆ ಕಂಡಿದ್ದು, ದಿನದ ಅಂತ್ಯಕ್ಕೆ ೨೪ ಸಾವಿರದ ೩೪೭ ಅಂಕಗಳು ದಾಖಲಾಗಿದೆ. ವಿದೇಶಿ ಮಾರುಕಟ್ಟೆಯಲ್ಲಿಂದು ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೮೪ ರೂಪಾಯಿ ೫೪ ಪೈಸೆಯಷ್ಟಾಗಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>